ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

## ಅಂತರ ಕಾಲೇಜು ಕ್ರಿಕೆಟ್ ಟೂರ್ನಿ

# ಜೈನ್ ಕಾಲೇಜ್ ಚಾಂಪಿಯನ್



**ಬೆಂಗಳೂರು:** ವಿಜಯ ಅಂತರ ಕಾಲೇಜು ಕ್ರಿಕೆಟ್ ಟೂರ್ನಿಯಲ್ಲಿ ವಿವಿ ಪುರಂನ ಎಸ್‌ಬಿಎಂ ಜೈನ್ ಕಾಲೇಜು ಚಾಂಪಿಯನ್ ಆಗಿ ಹೊರಹೊಮ್ಮಿದೆ.

ಟೂರ್ನಿಯ ಫೈನಲ್‌ನಲ್ಲಿ ಆದು ಜೆಸಿ ರಸ್ತೆಯಲ್ಲಿರುವ ಜೈನ್ ಕಾಲೇಜನ್ನು 23 ರನ್ ಗಳಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿತು. ಮೊದಲು ಬ್ಯಾಟ್ ಮಾಡಿದ ಎಸ್‌ಬಿಎಂ ಜೈನ್ ಕಾಲೇಜು, ರೋಹನ್ ನಾಯಕರ್ (71)ಅವರ ಉಪಯುಕ್ತ ಅರ್ಧ ಶತಕದ ನೆರವಿನಿಂದ ಏಳು ವಿಕೆಟ್‌ಗೆ 173 ರನ್ ಕೂಡಿಹಾಕಿತು.

ಪ್ರತಿಯಾಗಿ ಜೈನ್ ಜೆ.ಸಿ. ರೋಡ್, ಒಂಬತ್ತು ವಿಕೆಟ್ ಕಳೆದುಕೊಂಡು 150 ರನ್ ಮಾಡಿತು. ಆಯೆವಂತ್ 36 ಹಾಗ ಪ್ರಜ್ವಲ್ 26 ರನ್ ಮಾಡಿ ಗಮನ ಸೆಳೆದರು. ವಿಜೇತ ತಂಡದ ಪರ ರೋಹನ್ ಶೆಟ್ಟಿ 24 ರನ್ನಿಗೆ ಎರಡು ವಿಕೆಟ್ ಪಡೆದು ಯಶಸ್ವಿ ಬೌಲರ್ ಎನಿಸಿದರು.